**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶಿಡ್ಲಘಟ್ಟ**

ಸಿಸಿ.368/2014

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪಿ ಬಿ ಹನುಮಂತಪ್ಪ | ಸಿಡಬ್ಲೂ: **11** |
| ತಂದೆ ಹೆಸರು : | | **ಲೇಟ್ ಆರ್ ಪಿ ಭೀಮಪ್ಪ** | ಪಿಡಬ್ಲೂ: **04** |
| ವಯಸ್ಸು | : | 63 ವರ್ಷ | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | : | ನಿವೃತ್ತ ಆರಕ್ಷಕ ನಿರೀಕ್ಷಕರು | 24.01.2026. |
| ವಾಸ ಸ್ಥಳ | : | **ಪಾವಗಡ, ತುಮಕೂರು ಜಿಲ್ಲೆ.** | |

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ಯವರಿಂದ:

ನಾನು ದಿ:**08.11.2012** ರಿಂದ **03.07.2014** ರವರೆಗೆ ನಾನು ಶಿಡ್ಲಘಟ್ಟ ಗ್ರಾಮಂತರ ಪೋಲೀಸ್ ಠಾಣೆಯಲ್ಲಿ ಆರಕ್ಷಕ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಸಿದ್ದೇನೆ.

**2.** ದಿ:**20.01.2014** ರಂದು ಈ ಪ್ರಕರಣದ ಕಡತವನ್ನು ಚಾ.ಸಾ.**10** ರವರಿಂದ ಪಡೆದುಕೊಂಡು, ಪರಿಶೀಲಿಸಿ ತನಿಖೆ ಮುಂದುವರೆಸಿರುತ್ತೇನೆ. ಅದೇ ದಿನ ಚಾ.ಸಾ.**1** ಮತ್ತು **2** ರವರ ಮರು ಹೇಳಿಕೆ ಮತ್ತು ಚಾ.ಸಾ.**8** ರವರ ಹೇಳಿಕೆ ದಾಖಲಿಸಿರುತ್ತೇನೆ. ಆರೋಪಿಗಳು ನ್ಯಾಯಾಲಯದಿಂದ ಜಾಮೀನು ಪಡೆದು ಆದೇಶವನ್ನು ನನ್ನ ಮುಂದೆ ಹಾಜರುಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

**3.** ದಿ:**10.02.2014** ರಂದು ಕೈ ಬಿಟ್ಟಿರುವ ಆರೋಪಿ ದರ್ಶನ್ ರವರು ತಾವು ವೆಂಕಟೇಶ್ವರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪರೀಕ್ಷೆಗೆ ಹಾಜರಾಗಿರುವ ಬಗ್ಗೆ ದಾಖಲೆಗಳು ನೀಡಿರುತ್ತಾರೆ. ಕೊಟ್ಟಿರುವುದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ದಾಖಲೆಯಲ್ಲಿ ನನ್ನ ಸಹಿ ಇದ್ದು ಅದನ್ನು ನಿ.ಪಿ.**4** ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.**4**(ಎ) ಎಂದು ಗುರುತಿಸಲಾಯಿತು. ಕೈ ಬಿಟ್ಟಿರುವ ಆರೋಪಿ ರಾಕೇಶ್ ರವರು ವಿದ್ಯಾರ್ಥಿ ನಿಲಯದಲ್ಲಿ ವಾಸವಾಗಿರುವುದಾಗಿ ದೃಢೀಕರಣ ಪತ್ರ ನೀಡಿದ್ದು ಅದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದರಲ್ಲಿ ನನ್ನ ಸಹಿ ಇದ್ದು ಅದನ್ನು ನಿ.ಪಿ.**5** ಎಂದು ಸಹಿಯನ್ನು ನಿ.ಪಿ.**5**(ಎ) ಎಂದು ಗುರುತಿಸಲಾಯಿತು. ಕೈಬಿಟ್ಟಿರುವ ಆರೋಪಿ ನೀಲಮ್ಮ ಮತ್ತು ಸುಶೀಲಮ್ಮ ರವರು ಸ್ತ್ರೀಶಕ್ತಿ ಬ್ಯಾಂಕ್ ನ ವಾರ್ಷಿಕ ಮಹಾ ಸಭೆಗೆ ಹಾಜರಾಗಿರುವ ಬಗ್ಗೆ ದೃಢೀಕರಣಗಳನ್ನು ನೀಡಿದ್ದು ಅವುಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.**6** ಮತ್ತು **7** ಎಂದು ಅವುಗಳಲ್ಲಿರುವ ನನ್ನ ಸಹಿಯನ್ನು ನಿ.ಪಿ.**6**(ಎ) ಮತ್ತು **7**(ಎ) ಎಂದು ಗುರುತಿಸಲಾಯಿತು.

**4.** ದಿ:**06.04.2014** ರಂದು ಚಾ.ಸಾ.**1** ಮತ್ತು **2** ರವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದು ಈಗಾಗಲೇ ಗುರುತಿಸಿರುವ ನಿ.ಪಿ.**2** ಮತ್ತು **3** ರಂತೆ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಅವುಗಳಲ್ಲಿರುವ ನನ್ನ

ಸಹಿಯನ್ನು ನಿ.ಪಿ.2(ಬಿ) ಮತ್ತು ನಿ.ಪಿ.3(ಬಿ) ಎಂದು ಗುರುತಿಸಲಾಯಿತು. ಈ ಹಂತದಲ್ಲಿ ಆರೋಪಿತರ ವಿರುದ್ಧ ಆಪಾದನೆ ಮೇಲ್ನೋಟಕ್ಕೆ ಸಾಭೀತಾದ ಕಾರಣ ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ. ಆರೋಪಿ ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ.

<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಡಿ ವಿ ಎಸ್ ವಕೀಲರಿಂದಃ</u>

ಚಾ.ಸಾ.1 ಮತ್ತು 2 ರವರು ನನಗೆ ಯಾವುದೇ ಮರು ಹೇಳಿಕೆ ಮತ್ತು ಚಾ.ಸಾ.8 ರವರು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಎನ್ನಲಾದ ದರ್ಶನ್, ರಾಕೇಶ್, ಸುಶೀಲಮ್ಮ ಮತ್ತು ನೀಲಮ್ಮ ರವರನ್ನು ಕೈ ಬಿಟ್ಟಿರುವುದರಿಂದ ಚಾ.ಸಾ.1 ರವರು ಹೇಳಿರುವ ಘಟನೆ ನಡೆದೇ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.2 ಮತ್ತು 3 ಗಾಯದ ಪ್ರಮಾಣ ಪತ್ರಗಳನ್ನು ಚಾಸಾ.1 ಮತ್ತು 2 ರವರಿಗೆ ಅನೂಕೂಲವಾಗುವಂತೆ ಪಡೆದು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆ ಮಾಡದೇ ಆರೋಪಿಗಳ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾ.ಸಾ.1 ರವರು ಹೇಳಿರುವ ಘಟನೆ ನಡೆದೆ ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಶಿಡ್ಲಘಟ್ಟ.